ಇಮಾಂ ಹುಸೇನ್ ಸಾಬರಿಗೆ ಮುಫತ್ತಾಗಿ ಮಂಜೂರು ಮಾಡಿ, ರಿಜಿಸ್ಟರು ಮಾಡಿಕೊಟ್ಟಿದೆ. ಉಳಿದಿದ್ದರಲ್ಲಿ ಐದೆಕರೆ 1952ರಲ್ಲಿ ಬೈಲಕ್ಕಸಾಲಿಗರ ಸಿದ್ದಾಚಾರಿ ಅನ್ನೋರ ಹೆಸರಿಗೆ ಹೋಗಿದೆ. 1956ರ ನಂತರದ ದಾಖಲೆಯಲ್ಲಿ ಗೋಮಾಳದ ವಿಸ್ತೀರ್ಣ ಎಂಟೆಕರೆ ಅಂತ ನಮೂದಾಗಿದೆ. ಈ ದಾಖಲೆಗಳನ್ನು ಇಟ್ಟುಕೊಂಡು ನಾವು ಕೋರ್ಟಿಗೆ ಹೋಗಬಹುದು ಅಂತ ಹೇಳಿ ಅಲ್ಲಿದ್ದವರಿಗೆಲ್ಲಾ ಸಂತೋಷ ಮತ್ತು ಆಶ್ಚರ್ಯ ಎರಡನ್ನೂ ಹುಟ್ಟಿಸಿಬಿಟ್ಟ!

ಸಿದ್ದಾಚಾರಿ ಅನ್ನೋ ವ್ಯಕ್ತಿ ಹೊಸಳ್ಳಿಯಲ್ಲಿದ್ದ ಅನ್ನೋದು ಊರಿನ ಕೆಲವೇ ಹಿರಿಯರಿಗೆ ನೆನಪಿದೆ. ಮಕ್ಕಳಿಲ್ಲದ ಅವನು ಊರುಬಿಟ್ಟು ಎಲ್ಲಿಗೋ ಹೋದ. ಅವನಿನ್ನೂ ಬದುಕಿದ್ದಾನೋ ಇಲ್ಲವೋ ಯಾರಿಗೂ ಗೊತ್ತಿಲ್ಲ. ಊರು ಅವನನ್ನು ಮರೆತಿತ್ತು. ಸಿದ್ದಾಚಾರಿ ತನ್ನ ಜಮೀನನ್ನು ಏನು ಮಾಡಿದ. ಮಾರಿದ್ದರೆ ಅದು ಈಗ ಯಾರ ಹೆಸರಲ್ಲಿದೆ ಅನ್ನೋ ವಿವರಗಳು ಸಿಕ್ಕರೆ ಏನಾದರೂ ಮಾಡಬಹುದು ಅಂತ ವಿಶ್ವನಾಥ ಹೇಳಿದ.

'ವಿಶ್ವಣ್ಣ ನೀನು ನಾಳೆಯೇ ದುರ್ಗಕ್ಕೆ ಹೋಗಿ, ಸರ್ವೆ ಆಫೀಸಿನಲ್ಲಿ ದಾಖಲೆಗಳನ್ನು ತೆಗೆಸಿನೋಡು. ನಮಗೆ ಬೇಕಾದ ದಾಖಲೆಗಳನ್ನು ತಗಂಡು ಬಾ...' ಅಂತ ಪ್ರೆಸಿಡೆಂಟರು ವಿಶ್ವನಾಥನಿಗೆ ಎಲ್ಲರ ಎದುರೇ ಹೇಳಿದರು. 'ಹೋಗೋ ಮೊದಲು ಮನೆಗೆ ಬಾ. ದುಡ್ಡು ಕೊಡ್ತೀನಿ, ನಾಳೆನೇ ಹೋಗಬೇಕು. ಎರಡು ದಿನ ತಡ ಆದರೂ ಪರವಾಗಿಲ್ಲ. ಎಲ್ಲಾ ದಾಖಲೆ ತರಬೇಕು' ಅಂತ ಮತ್ತೊಮ್ಮೆ ಹೇಳಿ ಸಭೆ ಮುಗಿಸಿದರು.

ವಿಶ್ವನಾಥನ ಕೈಯಲ್ಲಿದ್ದ ಕಾಗದ ಪತ್ರಗಳನ್ನು ನೋಡುವ ಗೋಜಿಗೆ ಯಾರೂ ಹೋಗಲಿಲ್ಲ. ಆ ಕ್ಷಣಕ್ಕೆ ಅವನು ಊರವರ ಕಣ್ಣಿಗೆ ಆಪತ್ಬಾಂಧವನಂತೆ ಕಾಣಿಸಿದ. ಅವನಲ್ಲಿ ಹರಿತಿರೋದು ಶಾನುಭೋಗರ ರಕ್ತ. ಅವನ ತಾತ ನರಸಿಮ್ಮಯ್ಯನೋರ ಎಲ್ಲಾ ಗುಣಗಳು ಅವನಲ್ಲಿವೆ. ಅವರು ಸಾಯೊವರೆಗೂ ಊರವರ ಭೂಮಿಗಳ ಸರ್ವೆ ನಂಬರು, ಚೆಕ್ಕುಬಂದಿ ಎಲ್ಲವನ್ನೂ ಪಾಯಿಪಾಠ ಮಾಡಿದಂತೆ ಹೇಳುತ್ತಿದ್ದರು! ಸರ್ಕಾರ ಅವರ ಶಾನುಭೋಗಿಕೆಯನ್ನು ಕಿತ್ತುಕೊಂಡು ಅನ್ಯಾಯ ಮಾಡಿತು ಅಂತ ಒಬ್ಬಿಬ್ಬರು ಸಂತಾಪದ ಧ್ವನಿಯಲ್ಲಿ ಹೇಳಿದರು.

ಮನೆಗೆ ಬಂದ ಮೇಲೆ ಪ್ರೆಸಿಡೆಂಟರು ವಿಶ್ವನಾಥನಿಗೆ ಫೋನ್ ಮಾಡಿದರು. 'ಗೋಮಾಳದ ಹದಿನೈದು ಎಕರೆಯಲ್ಲಿ ಎರಡೆಕರೆಯನ್ನು ಇಮಾಂ ಸಾಬರು, ಐದೆಕರೆಯನ್ನು ಸಿದ್ದಾಚಾರಿ ಒತ್ತುವರಿ ಮಾಡಿದ್ದಾರೆ. ಅದನ್ನು ಊರ ಸುಪರ್ದಿಗೆ ಕೊಡಿಸಿ ಅಂತ ಅರ್ಜಿ ಕೊಡಬಹುದೇ' ಅಂತ ಕೇಳಿದರು. ವಿಶ್ವನಾಥ ಹಿಂಜರಿದ. 'ಅರವತ್ತೆಪ್ಪತ್ತು ವರ್ಷ ಕಳೆದ ಮೇಲೆ ಭೂಮಿ ಒತ್ತುವರಿ ಮಾಡಿದ್ದಾರೆ ಅಂತ ಹೇಳೋದು ಸರಿಯಲ್ಲ. ತರ್ಲೆ ಮಾಡಬೇಕು ಅಂತಿದ್ದರೆ ಅರ್ಜಿ ಕೊಡಬಹುದು. ಆದರೆ, ಮೊದೀನ್ ಸಾಬರ ಹತ್ರ ದಾಖಲೆಗಳಿರಬಹುದು, ಕೇಳಿ ನೋಡಿ... ಅರ್ಜಿ ಕೊಡೊ ಮೊದಲು ಒಂದ್ ಸಲ ಯೋಚನೆ ಮಾಡಿ... ಹಾವು ಹೊಡೆದು ಹದ್ದಿಗೆ ಹಾಕಿದರು ಅನ್ನಂಗೆ ಆಗಬಾರ್ದು' ಅಂದ.

ಬೆಳಗ್ಗೆ ಪಿಡಿಒನನ್ನು ಮನೆಗೆ ಕರೆಸಿಕೊಂಡ ಪ್ರೆಸಿಡೆಂಟರು, ಇಮಾಂ ಸಾಬರು ಮತ್ತು ಸಿದ್ದಾಚಾರಿ ಗೋಮಾಳದ ಜಮೀನು ಒತ್ತುವರಿ ಮಾಡಿದ್ದಾರೆ ಅಂತ ದೂರು ಅರ್ಜಿ ಬರೆಸಿದರು. ವಿಶ್ವನಾಥ ಬಂದ ಮೇಲೆ ಅರ್ಜಿಯನ್ನು ಅವನಿಗೆ ಕೊಡುತ್ತ ಇದನ್ನು ಇವತ್ತೇ ತಹಸೀಲ್ದಾರರಿಗೆ ಕೊಟ್ಟು ಆ ಮೇಲೆ ನೀನು ದುರ್ಗಕ್ಕೆ ಹೋಗು. ಅರ್ಜಿ ವಿಷಯ ಯಾರಿಗೂ ಗೊತ್ತಾಗಬಾರದು ಅಂತ ಹೇಳಿ ಖರ್ಚಿಗೆ ಅಂತ ಅವನಿಗೆ ಮೂರು ಸಾವಿರ ರೂಪಾಯಿ ಕೊಟ್ಟರು.

'ಹೊಸಳ್ಳಿಯಲ್ಲಿ ಗೋ ಸಂಪತ್ತು ಹೆಚ್ಚಾಗ್ತ ಇದೆ. ಈಗ ಮೇವಿನ ಕೊರತೆ ಇದೆ. ಗೋವು ರಾಷ್ಟ್ರೀಯ ಸಂಪತ್ತು. ಅದನ್ನು ಉಳಿಸಿಕೊಳ್ಳಬೇಕಿದೆ. ನಮ್ಮೂರಿನ ಗೋಮಾಳದಲ್ಲಿ ಒಂದೆರಡು ಕೊಳವೆ ಬಾವಿಗಳನ್ನು ಕೊರೆಸಿ ಆಫ್ರಿಕನ್ ಮೆಕ್ಕೆಜೋಳ ಬೆಳೆದು ಮೇವಿನ ಕೊರತೆ ನೀಗಬೇಕು...'